# ಕಾಡಿನ ನೆನಪು

ಆ ಎಲೆಗಳ ಮೇಲೆಲ್ಲ
ಮುಗಿಲು ಕೂತು ತಲೆಯಾಡಿಸಿದಂತೆ
ಉದ್ದ ಉದ್ದ ಮರಕ್ಕೆ
ಕೊಕ್ಕೆಯ ಬೆರಳು ಚಾಚುವಾಗ.
ಆ ಮರಗಳ ಬುಡದಲ್ಲಿ
ಹಿಂದೆಂದೋ ಇದ್ದಂತಿದ್ದ ಕಾಲ್ದಾರಿ

ಆಗಾಗ ಹುಲಿ ಮೀಸೆ
ಒರೆಸಿಕೊಳ್ಳುವಾಗ
ಜಿಂಕೆಯ ಕೋಡಿನ ಅವಶೇಷಕ್ಕೆ
ಇರುವೆಗಳ ಮುತ್ತಿಗೆ.
ಗರ್ಜನೆಗೆ ನನ್ನೆದೆಯ ಹಕ್ಕಿಗಳು
ಆಗಾಗ ಗಾಳಿಯ ಹಗ್ಗ ಎಳೆಯುತ್ತವೆ
ಮರದಿಂದ ಮರಕ್ಕೆ.

ಹುಲ್ಲುಗಳ ನೆರಳ ಹಿಂದೆ
ಮೊಲದ ಕಿವಿ
ಕವಿತೆ ಕೇಳುವುದಿಲ್ಲ;
ಅದಕ್ಕೆ ಅದರದ್ದೇ ಹಾಡು.
ಅಂಗೈಗೆ ಮಣ್ಣು ತಾಕಿದರೂ
ಅದರ ಮೈಗೆ ಒರೆಸಿಕೊಂಡಿದ್ದು
ನೆನಪಿಲ್ಲ

ಬೇಲಿಯಿಲ್ಲದ ಜಾಗ
ಕ್ಕೆ ಬಂದ ದನ
ತಲೆ ಬಗ್ಗಿಸಿ ಹುಲ್ಲು ಮೇಯುವಾಗ
ನನಗೆ ಹಾಲು ಕರೆಯುವ ಬಯಕೆ.
ಕಪಿಲೆ ಕಪಿಲೆ...
ಬಯಲಲ್ಲಿ ಓಡತೊಡಗಿದೆ
ಕೊರಳ ಗಂಟೆ ಸದ್ದ ಹಿಂದೆ.

ಇಂಥ ಒಂದು ಕಾಡ
ನೋಡಿದ್ದೆ ಅವನ ಕಂಗಳಲ್ಲಿ
ಒಮ್ಮೆ.

● 'ಶ್ರೀ' ತಲಗೇರಿ





ಕಲೆ: ವೆಂಕಟ್ರಮಣ ಭಟ್